ಶ್ರೀ ಪಿ. ಬಸವರಾಜ್.—ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿರುವ ಜಾತಿಗಳಿಷ್ಟು, ಉಪಜಾತಿಗಳ ಹೆಸರು ಸಮೇತ ವಿವರ ತಿಳಿಸುವುದು ಎಂದು ನಾನು ಪ್ರಶ್ನೆ ಕೇಳಿದ್ದೆ. ಆದೇರೀತಿ ನಾಯಿರಿ ಎಂಬ ಜಾತಿ, ಪಟ್ಟಿಯಲ್ಲಿ ಬಿಟ್ಟು ಹೋಗಿರುವುದೇ ಎಂದು ಕೇಳಿದ್ದೇನೆ. ಇಲ್ಲಿ ಏನಾಗಿದೆಯೆಂದರೆ, ಈ ಒಂದು ಜಾತಿಯನ್ನು ನಾವು ಗುರುತಿಸಲಿಲ್ಲ. ಆಮೇಲೆ ಗುರುತಿಸಿದ ಮೇಲೆ ಅದನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೇ ಅಥವಾ ಮುಂದುವರಿದುದಕ್ಕೆ ಸೇರಿಸಬೇಕೆ ಎಂಬ ಪ್ರಶ್ನೆ ಬರುತ್ತದೆ. ಆದರೆ ನಾಯಿರಿ ಜಾತಿ ಯಾವ ಪಟ್ಟಿಯಲ್ಲೂ ಇಲ್ಲ. ಅವರು ಇದ್ದಾರೊ ಇಲ್ಲವೊ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೊ ಇಲ್ಲವೊ ಎನ್ನುವುದು ನನಗೆ ಅನುಮಾನ ಇದೆ. ಏಕೆಂದರೆ, ಈ ಒಂದು ಜಾತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಉಡುಪಿ ಮತ್ತು ಕುಂದಾಪುರ ತಾಲ್ಲೂಕಿನಲ್ಲಿ ಮಾತ್ರ ಇರುವಂಥ ಜಾತಿ. ಈ ಜಾತಿಯನ್ನು ಎಲ್ಲಿಯೂ ಗುರುತಿಸಿದ ಹಾಗೆ ಕಾಣಲಿಲ್ಲ. ಆದುದರಿಂದ ಆ ಜಾತಿಯನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ಬಗ್ಗೆ ಯಾವ ರೀತಿಯ ಕಾರ್ಯವನ್ನು ಕೈಗೊಂಡಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಈಗಿನ ಕ್ಲಾಸಿಫಿಕೇಷನ್ ಪ್ರಕಾರ ಗ್ರೂಪ್ ಎ,ಬಿ.ಸಿ.ಡಿ. ಯಲ್ಲಿ ಸೇರಿಸದೆ ಯಾವ ಜಾತಿ ಉಳಿದಿರಬಹುದೆ ಅದನ್ನು ಗ್ರೂಪ್ 'ಇ' ಯಲ್ಲಿ ಸೇರಿಸಿದೆ. ಅವು ರೆಸಿಡುಯರಿ ಕಮ್ಯುನಿಟೀಸ್ ಆದುದರಿಂದ ನಾಯಿರಿ ಕಮ್ಯುನಿಟಿ ಎಂದು ಯಾವುದನ್ನೂ ತಾವು ಪ್ರಸ್ತಾಪ ಮಾಡಿದ್ದೀರಿ ಆ ಜಾತಿಯವರಿಗೆ ಶೇರಪ್ಪು ಹಿಂದುಳಿದ ವಿೂಸಲಾತಿಯ ಸೌಲಭ್ಯ ಸಿಗುತ್ತದೆ. ಬಹುಶಃ ನಾಯಿರಿ ಜಾತಿಯವರು ಬ್ಯಾಕ್‌ವರ್ಡ್‌ಕ್ಲಾಸ್ ಆಗಿದ್ದರೆ, ಸರಿಯಾದ ಮಾಹಿತಿ ಇದ್ದರೆ ಕನಿಷ್ಪ ಪಕ್ಷ ಚಿನ್ನಪ್ಪರೆಡ್ಡಿ ಕಮಿಷನ್‌ನಲ್ಲಿ ಕೊಡಬಹುದು. ನಾನು ಪ್ರಾಸಂಗಿಕವಾಗಿ ಹೇಳುವುದಿದ್ದರೆ, I think the hon'ble member instead of coming up every time with a question here he could have rather advised them to properly submit a memorandum to the commission. ಆ ಅಂಕಿ ಅಂಶಗಳನ್ನೆಲ್ಲ ಬಹುಶಃ ಚಿನ್ನಪ್ಪರೆಡ್ಡಿ ಕಮಿಷನ್‌ಗೆ ಕೊಟ್ಟಿದ್ದರೆ, at least that question would have solved. Even now I advise the hon'ble member to see that the group may make a representation to the Cabinet sub-committee or to the Government with all statistics that they have so that some relief could be made available to them. I know that this a backward class. But for want of proper representation before the commission I think they have failed. This is my sincere advise to the hon'ble member.

ಶ್ರೀ ಪಿ. ಬಸವರಾಜ್.—ರೆಪ್ರೆಸೆಂಟಿಷನ್ ಮಾಡಿಲ್ಲ ಎಂದು ಮಂತ್ರಿಗಳು ಹೇಳಿದ್ದಾರೆ. ಹಿಂದೆ ವೆಂಕಟಸ್ವಾಮಿ ಆಯೋಗದ ಎದುರು ಈ ಜಾತಿಯವರು ಹೋಗಿ ತಮ್ಮ ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ ಆಮೇಲೆ ಚಿನ್ನಪ್ಪರೆಡ್ಡಿ ಆಯೋಗದ ಎದರಂ ಹೋಗಿ ರೆಪ್ರೆಸೆಂಟೇಷನ್ ಮಾಡಿದ್ದಾರೆ. ಜಿಲ್ಲಾ ಪರಿಷತ್ತಿಗೆ ಹೋಗಿ ಮಾಡಿದ್ದಾರೆ, ಸರ್ಕಾರಕ್ಕೆ ಮಾಡಿದ್ದಾರೆ, ಸಂಬಂಧಪಟ್ಟ ಸಚಿವರಿಗೂ ರೆಪ್ರೆಸೆಂಟೇಷನ್ ಮಾಡಿದ್ದಾರೆ. ಆದರೆ, ಈ ಜಾತಿಯವರನ್ನು ಯಾವುದೇ ರೀತಿಯಲ್ಲೂ ಗುರುತಿಸಲಿಲ್ಲ. ಕಡೆಗಣಿಸಲಾಗಿದೆ ಎನ್ನುವ ನೋವು ಇದೆ. ಇನ್ನು ಮುಂದಾದರೂ ಸರ್ಕಾರ ಅವರನ್ನು ಗುರುತಿಸಿ ಹಿಂದುಳಿದವರ ಪಟ್ಟಿಗೆ ಸೇರಿಸಬೇಕೋ ಅಥವಾ ಬೇಡವೋ ಎನ್ನುವುದನ್ನು ನಿರ್ಧರಿಸತಕ್ಕೆ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ಆದರೆ ಆ ಒಂದು ಜಾತಿ ಇದೆ ಎಂಬುದನ್ನು ತಾವು ಗುರುತಿಸಬೇಕು...

ಅಧ್ಯಕ್ಷರು.—ಅವರಿಗೆ ಕ್ಯಾಬಿನೆಟ್ ಸಬ್ ಕಮಿಟಿಗೆ ಒಂದು ರೆಪ್ರೆಸೆಂಟೇಷನ್ ಕೊಡುವುದಕ್ಕೆ ಹೇಳಿ.

ಮುಳಬಾಗಿಲು ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಬಗ್ಗೆ.

೧೫೭೭. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಇದವರೆವಿಗೆ ಎಷ್ಟು ಬಾವಿ ಮತ್ತು ಬೋರ್‌ವೆಲ್‌ಗಳಿಗೆ ವಿದ್ಯುತ್ ಸರಬರಾಜು ಒದಗಿಸಲಾಗಿದೆ ?

ಆ) ವಿದ್ಯುತ್ ಕೋರಿ ಬಂದಿರುವ ಅರ್ಜಿಗಳೆಷ್ಟು ? (ಬೋರ್‌ವೆಲ್‌ಗಳಿಗೋಸ್ಕರ).

ಇ) ಇವುಗಳಿಗೆ ವಿದ್ಯುತ್ ಮಂಜೂರು ಮಾಡದಿರಲು ಕಾರಣವೇನು ?

ಈ) ಯಾವಾಗ ವಿದ್ಯುತ್ ಮಂಜೂರು ಮಾಡುತ್ತೀರಿ ಹಾಗೂ ವಿದ್ಯುತ್ತಿನ ಸರಬರಾಜಿಗೆ ಏನು ಕ್ರಮ ಕೈಗೊಂಡಿದ್ದೀರಿ ?

ಉ) ತಾಲ್ಲೂಕಿನಲ್ಲಿ ವೋಲ್ಟೇಜ್ ಅಭಿವೃದ್ಧಿಗೆ ೬೨ ಕೆ. ವಿ. ಟ್ರಾನ್ಸ್‌ಫಾರ್ಮರ್‌ಲ್ ಹಾಕಲಾಗುತ್ತಿದ್ದೀಯೇ. ವೋಲ್ಟೇಜ್ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮವೇನು. ಯಾವಾಗ ವೋಲ್ಟೇಜ್ ಅಭಿವೃದ್ಧಿಯಾಗುವುದು ?

ಶ್ರೀ ಎಸ್. ಎಂ. ಯಹ್ಯಾ (ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು).—

ಆ) ದಿನಾಂಕ. ೩೧–೩–೧೯೯೦ ರಲ್ಲಿರುವಂತೆ ಮುಳಬಾಗಿಲು ತಾಲ್ಲೂಕಿನಲ್ಲಿ ವಿದ್ಯುದ್ದೀಕರಿಸಲಾಗಿರುವ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ. ೬೩೬೫. ಇವುಗಳಲ್ಲಿ ೪೨೪೩ ಬಾವಿಗಳು ಮತ್ತು ೨೧೨೨ ಬೋರ್‌ವೆಲ್‌ಗಳು.

ಆ) ೧೯೮೯–೯೦ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ನೀರಾವರಿ ಪಂಪು ಸೆಟ್ಟುಗಳಿಗಾಗಿ ವಿದ್ಯುತ್ ಕೋರಿ ನೋಂದಾಯಿತವಾದ ಅರ್ಜಿಗಳ ಸಂಖ್ಯೆ ೪೨೧ ಇದರಲ್ಲಿ ಸುಮಾರು ೨೮೦ ಅರ್ಜಿಗಳು ಬೋರ್‌ವೆಲ್‌ಗಳಲ್ಲಿ ಪಂಪುಸೆಟ್ಟುಗಳನ್ನು ಅಳವಡಿಸಲು, ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸುತ್ತದೆ.

ಇ) ಈ ಪೈಕಿ ೮೧ ಅರ್ಜಿದಾರರಿಗೆ ವಿದ್ಯುತ್ ಸಂಪರ್ಕ ಮಂಜೂರಾಗಿದ್ದು ಬಾಕಿ ಉಳಿದ ೩೪೦ ಅರ್ಜಿದಾರರಿಗೆ, ವಿದ್ಯುತ್ ಸಂಪರ್ಕ ಮಂಜೂರೂ ಮಾಡಬೇಕಾಗಿದೆ. ಈ ಮುಳಬಾಗಿಲು ತಾಲ್ಲೂಕು ಕಪ್ಪು ಪ್ರದೇಶ (ಡಾರ್ಕ್ ಏರಿಯಾ) ವೆಂದು ಘೋಷಿಸಲ್ಪಟ್ಟಿರುವುದರಿಂದ, ಗ್ರಾಮೀಣ ವಿದ್ಯುದ್ದೀಕರಣ ನಿಗಮವು ಆರ್ಥಿಕ ಸಹಾಯವನ್ನು ಮಂಡಳಿಗೆ ನೀಡುತ್ತಿಲ್ಲ. ಆದ್ದರಿಂದ ಈ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣವನ್ನು, ಮಂಡಳಿಯು ತನ್ನದೇ ಆದ ಆರ್ಥಿಕ ಸಂಪನ್ಮೂಲದ ಮೂಲಕ ಮಾಡಲು ಕ್ರಮ ತೆಗೆದುಕೊಂಡಿದೆ.

ಈ) ರಾಜ್ಯಾದ್ಯಂತ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣವನ್ನು, ಸರ್ಕಾರವು ಅಂಗೀಕರಿಸಿರುವ 'ರೋಸ್ಟರ್' ಪ್ರಕಾರ ಮಾಡಲಾಗುತ್ತಿದೆ. ಮುಳಬಾಗಿಲು ತಾಲ್ಲೂಕಿನಲ್ಲೂ ಸಹಾ ಇದೇ 'ರೋಸ್ಟರ್' ಪ್ರಕಾರ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣವನ್ನು ಮಾಡಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅರ್ಜಿದಾರರಿಗೆ ಪ್ರಥಮ ಆದ್ಯತೆಯನ್ನು ಮತ್ತು 'ನೂರು ಬಾವಿ' ಯೋಜನೆಯಲ್ಲಿ ನೋಂದಾಯಿತವಾದ ಅರ್ಜಿದಾರರಿಗೆ ನಂತರದ ಆದ್ಯತೆಯನ್ನು ನೀಡಲಾಗುತ್ತಿದೆ. ಉಳಿದ ಅರ್ಜಿದಾರರಿಗೆ 'ರೋಸ್ಟರ್' ನಲ್ಲಿನ ಹಿರಿತನದ ಮೇರೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

ಉ) ಮುಳಬಾಗಿಲು ತಾಲ್ಲೂಕಿನಲ್ಲಿ ವಿದ್ಯುತ್ ವೋಲ್ಟೇಜ್‌ನ ಅಭಿವೃದ್ಧಿಗಾಗಿ ಮುಳಬಾಗಿಲಿನಲ್ಲಿ ಒಂದು ೬೬–೧೧ ಕೆ. ವಿ. ಸಬ್–ಸ್ಟೇಷನ್ನನ್ನು ತಲಾ ೬.೩ ಎಂ.ವಿ.ಎ. ಸಾಮರ್ಥ್ಯದ ಎರಡು ಟ್ರಾನ್ಸ್‌ಫಾರ್ಮರ್‌ಗಳೊಡನೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಸಬ್–ಸ್ಟೇಷನ್ನಿನ ಕಾರ್ಯವನ್ನು ಈ ಸಾಲಿನಲ್ಲಿ (೧೯೯೦–೯೧) ಪೂರ್ಣಗೊಳಿಸಲು ಗುರಿ ಇಟ್ಟು ಕೊಳ್ಳಲಾಗಿದೆ. ಈ ಉದ್ದೇಶಿತ ಸಬ್–ಸ್ಟೇಷನ್ನಿಗೆ ವಿದ್ಯುತ್ ಸರಬರಾಜು ಮಾಡಲು ಕೋಲಾರದಿಂದ ಮುಳಬಾಗಿಲಿಗೆ ೬೬ ಕೆ.ವಿ. ಪ್ರಸಾರಣಾ ಮಾರ್ಗದ ನಿರ್ಮಾಣ ಕೆಲಸವು ಪ್ರಗತಿಯಲ್ಲಿದೆ.

SRI M. V. VENKATAPPA.—There is a reply that the Board is taking action to energise the pumpsets utilising its own resources. Which are those items and what is the total amount involved in that ?

SRI S. M. YAHYA.—He is really concerned aBout the Kolar District,

SRI M. V. VENKATAPPA.—About my constituency.

SRI S. M. YAHYA.—Mulbagal, it is also a part of Kolar District. Kolar District and Mulbagal have tremendous problems specially water problem. We have taken up number of scheme there. What

is required is that system should be improved. 100 KV line and 220 KV Line should have been provided instead of 33 KV Line. For that unless we improve the system as a whole, the load shedding, low voltage and all the problems will arise. So, we have proposed 220 KV sub-station at Kolar for which Rs. 5.60 crore has to be spent and this year we will spend another Rs. 84.40.00/—. Then to improve the whole system, what is required 66 KV line and sub-station at Masti i.e. Rs, 50,92,000 and 20 lakhs for 66 KV additional transformer at Irganqalli, Similarly this year itself the work is going on. 66 KV line to Bangarpet, 66 KV sub-station at Bangarpet, that is also Rs. 67.74 lakhs. 66 KV line to Mulbagal which will cost Rs. 74,84,000. So, in a very big way we are spending lot of money and in future also we have a programme so that proper current and power could be given to solve the pumpset problem.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಈಗ ಪವರ್ ಇಲ್ಲದೇ ಅಥವಾ ಮೆಟೇರಿಯಲ್ಸ್ ಇಲ್ಲದೆ ಸುಮಾರು ೩೪೦ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಟ್ಟಿಲ್ಲ. ಕಾರಣ ಮೈನ್ಸ್ ಮತ್ತು ಜಿಯಾಲಜಿ ಡಿಪಾರ್ಟ್‌ಮೆಂಟಿನವರು ಡಾರ್ಕ್ ಏರಿಯಾ ಎಂದು ಡಿಕ್ಲೇರ್ ಮಾಡಿದ್ದು, ಪವರ್ ಕೊಟ್ಟಿಲ್ಲ. ಅಲ್ಲಿನವರು ಸ್ವಂತ ಹಣ ಖರ್ಚು ಮಾಡಿ, ಬೋರ್‌ವೆಲ್ಸ್ ಹಾಕಿಕೊಂಡಿದ್ದರು, ಪವರ್ ಕೊಡುತ್ತಾ ಇಲ್ಲ. ಗಂಟೆಗೆ ೫–೬–೭ ಸಾವಿರ ಗ್ಯಾಲನ್ ನೀರು ಬರುತ್ತದೆ. ಅಂಥ ಕಡೆ ಕೂಡ ಪವರ್ ಕೊಟ್ಟಿಲ್ಲ. ೬೬ ಕೆ.ವಿ. ಲೈನ್ ಕೋಲಾರದಿಂದ ಮುಳುಬಾಗಿಲಿಗೆ ಏನು ಹಾಕಲಾಗುತ್ತಿದೆ ಎಂದು ಹೇಳಿದ್ದೀರಿ. ಅಲ್ಲಿ ಟವರ್ಸ್ ಹಾಕಿದ್ದಾರೆ, ಲೈನು ಮಾತ್ರ ಎಳೆಯಬೇಕು. ಈ ಡಿಸೆಂಬರ್ ಕೊನೆಯೊಳಗೆ ತಾವು ಪವರ್ ಕೊಡದೇ ಹೋದರೆ ಮತ್ತೆ ಜನವರಿಯಿಂದ ನಮಗೆ ಕ್ಷಾಮ ತರುವಾಗುತ್ತದೆ. ತಮಗೆ ಗೊತ್ತಿರುವಂತೆ, ನಮ್ಮ ಜಿಲ್ಲೆಯಲ್ಲಿ ಯಾವ ನದಿಗಳು ಇಲ್ಲ. ಇರುವ ಬೋರ್‌ವೆಲ್ಸ್‌ಗಾದರೂ ಕರೆಂಟ್ ಕೊಡಿ. ಮಾತೆತ್ತಿದರೆ ಮಲೆನಾಡು ಡೆವಲಪ್‌ಮೆಂಟ್ ಬೋರ್ಡು, ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡು ಎಂದು ಏನೇನು ಮಾಡುತ್ತಿರುತ್ತಾರೆ; ನಮ್ಮ ಜಿಲ್ಲೆಯನ್ನು ನಮ್ಮ ತಾಲ್ಲೂಕನ್ನು ಮಾತ್ರ ನೆಗೆಲೆಕ್ಟ್ ಮಾಡುತ್ತಿದ್ದಾರೆ. ದಯವಿಟ್ಟು ಹಾಗೆ ಮಾಡಬೇಡಿ. ಈ ೬೬ ಕೆ.ವಿ. ಲೈನನ್ನು ಈ ವರ್ಷದ ಕೊನೆಯೊಳಗೆ ಮಂಗಿಸಿ ಕೊಡಿ.

ಶ್ರೀ ಎಸ್. ಎಂ. ಯಾಹ್ಯಾ —ಕೋಲಾರ ಜಿಲ್ಲೆಯಲ್ಲಿ ಸಮಸ್ಯೆ ಇದೆ. ಯಾವ ಜಿಲ್ಲೆಗೂ ಮಾಡದಷ್ಟು ಕೆಲಸವನ್ನು ಅಲ್ಲಿ ಮಾಡುತ್ತಿದ್ದೇವೆ. ನಿಮ್ಮಲ್ಲಿ ನೀರಿನ ಸಮಸ್ಯೆ ಇರುವುದರಿಂದ ೮೧,೦೦೦ ಪಂಪುಸೆಟ್ಟುಗಳಿಗೆ ಈಗಾಗಲೇ ಕರೆಂಟ್ ಕೊಟ್ಟು ಬಿಟ್ಟಿದ್ದೇವೆ. ವಿದ್ಯುಚ್ಛಕ್ತಿ ಇಲಾಖೆಯವರು ಇಷ್ಟು ಹಣವನ್ನು ಯಾವ ಜಿಲ್ಲೆಗೂ ಖರ್ಚು ಮಾಡಿಲ್ಲ. ಅಷ್ಟು ಹಣವನ್ನು ಕೋಲಾರ ಜಿಲ್ಲೆಗೆ ಖರ್ಚು ಮಾಡಿದ್ದಾರೆ. ಆ ಅಂಕಿ ಸಂಖ್ಯೆಗಳನ್ನು ಹೇಳಬಲ್ಲೆ. ಆದರೆ ನಿಮ್ಮೆಲ್ಲ ಸಮಸ್ಯೆ ಇದೆ. ನಿಮ್ಮ ಸಮಸ್ಯೆಯನ್ನು ತಿಳಿದುಕೊಂಡು ನಾನಂ ಹೇಳಬಲ್ಲೆ. At least you should be grateful to all of use and especiall to the Government. We have really taken up your problem very seriously and the money we spent. if compared to all other districts, is more. We spent most of the money in Kolar district alone. As far as your line is concerned, certainly I will see that the material is supplied and this work will be completed as soon as possible.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ಬಗ್ಗೆ

೧೬೫೮ ಶ್ರೀ ಕೆ. ಎನ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳು ಹಾಗೂ ಹುರಿ ಮತ್ತು ಘಟಕಗಳು ಯಾವುವು?